amount asked for and the Schemes sent etc., He has simply stated that the allocation of funds to the Zilla Parishads is being made on the basis of the approved outlays under Plan and Non-Plan. There is no outlay for the removal of the imbalance of our area. Bidar, Gulbarga and Raichur stand at the bottom in the matter of development and programmes (Sl. No. 17, 18 and 19 of the list). Therefore, the development of Hyderabad-Karnataka area, the Zilla Parishads of those areas have specifically demanded additional funds. The Hon'ble Minister should have given the details of the amount asked for the amount release if any, the development activities that they are going to take etc., Will the Hon'ble Minister kindly give those details ?

SRI ABDUL NAZIR SAB.—I share with the anguish of the Hon'ble Member that this area is not developed compared to the other parts of the State. Bidar Zilla Parishad has paesed a resolution asking to create a Bidar Development Authority and for the sanction of Rs 500 Crores for the development of the District. That proposal is before the Government and a policy decision will have to be taken in this regard. We have made allotments to the Zilla Parishads as per the provisions in the Act for all schemes transferred to them and voted by this House. We have given the money. Therefore, providing additional money for the removal of the development imbalance of that area is a sperate question and that question has to be put to the Hon'ble Chief Minister, and not to me.

ಜೀತದಾಳುಗಳ ಸಂಖ್ಯೆ ಮತ್ತು ಪುನರ್ವಸತಿ

೧೦೭೬. ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಇದುವರೆವಿಗೂ ಗುರ್ತಿಸಿರುವ ಜೀತದಾಳುಗಳು ಪ್ರತಿ ಜಿಲ್ಲೆಯಲ್ಲಿ ಎಷ್ಟೆಷ್ಟು ಜನಗಳಿದ್ದಾರೆ ?

ಆ) ಅವರುಗಳ ಪುನರ್ ವಸತಿಗಾಗಿ ಸಾಮೂಹಿಕವಾಗಿ ಸರ್ಕಾರ ಕೈಗೊಂಡಿರುವ ಕಾರ್ಯ ಕ್ರಮಗಳೇನು ?

ಇ) ಸರ್ಕಾರವು ಜೀತದಾಳುಗಳನ್ನು ಪುನರ್ ವಸತಿ ಮಾಡಿದ್ದರೂ ಆ ಸೌಲಭ್ಯವನ್ನು ಕಳೆದು ಕೊಂಡು ಮತ್ತೆ ಜೀತಕ್ಕೆ ಸೇರಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು).—

ಅ) ಜಿಲ್ಲಾವಾರು ಗುರುತಿಸಿರುವ ಜೀತದಾಳುಗಳ ಪಟ್ಟಿಯನ್ನು ಲಗತ್ತಿಸಿದೆ.

ಆ) ೧) ಜೀತದಾಳುಗಳ ಪುನರ್ ವಸತಿಗಾಗಿ ಎಮ್ಮೆ, ಹಸು, ಕುರಿ ಒದಗಿಸುವುದರ ಮೂಲಕ ಮತ್ತು ಸಣ್ಣ ವ್ಯಾಪಾರ, ಗೃಹ ಕೈಗಾರಿಕೆ ನಡೆಸಲು (ತಲಾ) ರೂ. ೬,೨೫೦-೦೦ ಸಹಾಯ ಧನದ ಮೂಲಕ ಸೌಲಭ್ಯಗಳನ್ನು ನೀಡಲಾಗುತ್ತಿದೆ.

೨) ಸಾಧ್ಯವಾದ ಕಡೆಗಳಲ್ಲಿ ಸರ್ಕಾರಿ ಜಮೀನನ್ನು ವಂಜರಿಯಾ ಮಾಡಿರುತ್ತೆ.

೩) ಜನತಾ ವಸತಿ ಯೋಜನೆಯಿಂದ ಮನೆಗಳನ್ನು ಕಟ್ಟಿಸಿಕೊಡಲಾಗಿದೆ.

ನೀರಾವರಿ ಸೌಲಭ್ಯ ಇರುವ ಕಡೆ ಸಾಮೂಹಿಕ ನೀರಾವರಿ ಯೋಜನೆ ಮತ್ತು ಜೀತ ಮುಕ್ತರ ಎಸ್ಟೇಟನ್ನು ಸ್ಥಾಪಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

೪) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ರಾಜ್ಯದಲ್ಲಿ ೧೯೭೫–೭೬ರಲ್ಲಿ ಗುರ್ತಿಸಿರುವ ಜೀತದಾಳುಗಳ ಜಿಲ್ಲಾವಾರು ಪಟ್ಟಿ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಗುರ್ತಿಸಿರುವ ಜೀತದಾಳುಗಳು
೧	ಬಳ್ಳಾರಿ	೬೬೨
೨	ಬೆಳಗಾಂ	೧೯
೩	ಉತ್ತರ ಕನ್ನಡ	೮
೪	ಚಿತ್ರದುರ್ಗ	೧,೨೫೨
೫	ತುಮಕೂರು	೨,೮೪೧
೬	ರಾಯಚೂರು	೧೨೩
೭	ಚಿಕ್ಕಮಗಳೂರು	೨,೭೫೬
೮	ಬೀದರ್	೧೨
೯	ಹಾಸನ	೪,೮೧೯
೧೦	ಕೊಡಗು	೫೯
೧೧	ಧಾರವಾಡ	೧
೧೨	ಗುಲ್ಬರ್ಗ	೬೫
೧೩	ಮಂಡ್ಯ	೫,೨೪೩
೧೪	ಕೋಲಾರ	೨,೮೯೬
೧೫	ಬೆಂಗಳೂರು	೮,೮೭೧
೧೬	ಬಿಜಾಪುರ	೩೫೨
೧೭	ದಕ್ಷಿಣ ಕನ್ನಡ	೩೮೪
೧೮	ಮೈಸೂರು	೨೪,೩೩೫
೧೯	ಶಿವಮೊಗ್ಗ	೮,೭೯೧
	ಒಟ್ಟು	೬೨,೬೮೯

೬೨,೬೮೯ ಜನರು ಗುರ್ತಿಸಲಾಗಿದ್ದರೂ ಕೂಡ ೫,೫೨೦ ಜನರು ಅನರ್ಹರು ಎಂದು ಕಂಡು ಬಂದು ಕೈ ಬಿಡಲಾಗಿದೆ. ಇನ್ನುಳಿದ ೫೭,೧೬೯ ಜನರಲ್ಲಿ ಇದುವರೆಗೂ ೪೧,೦೮೨ ಜನರಿಗೆ ಪುನರ್ ವಸತಿ ಕಲ್ಪಿಸಲಾಗಿದೆ. ಇನ್ನು ಉಳಿದ ೧೬,೦೮೭ ಜನರಿಗೆ ಪುನರ್ ವಸತಿ ಕಲ್ಪಿಸಬೇಕಾಗಿರುತ್ತೆ.

ಶ್ರೀ ಜಿ. ರಾಜುಗೌಡ.—ರಾಜ್ಯದಲ್ಲಿ ಗುರುತಿಸಲಾಗಿರುವ ಜೀತದಾಳುಗಳು ೬೨,೬೮೯ ಜನರು ಇದ್ದಾರೆಂದು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ. ಇದರಲ್ಲಿ ೫,೫೨೦ ಜನರು ಅನರ್ಹರೆಂದು ಕಂಡು

ಬಂದಿದ್ದರಿಂದ ಕೈಬಿಡಲಾಗಿದೆ ಎಂದು ಹೇಳಿದ್ದೀರಿ. ಇವರು ಯಾವರೀತಿಯಲ್ಲಿ ಅನರ್ಹರಾಗಿದ್ದಾರೆ ಎನ್ನುವುದನ್ನು ತಿಳಿಸಬೇಕು. ಮುಂದೆ ತಮ್ಮ ಉತ್ತರದಲ್ಲಿ ೫೭.೧೬೯ ಜನರಲ್ಲಿ ೪೧,೦೮೨ ಜನರಿಗೆ ಪುನರ್ವಸತಿ ಕಲ್ಪಿಸಲಾಗಿದೆ. ಇನ್ನುಳಿದ ೧೬,೦೮೭ ಜನರಿಗೆ ಪುನರ್ವಸತಿ ಕಲ್ಪಿಸಬೇಕಾಗಿರುತ್ತದೆ ಎಂದು ಹೇಳಿದ್ದೀರಿ. ಜೀತದಾಳುಗಳು ಶೇಕಡ ೪೦ ರಷ್ಟು ಜನರು ಮೈಸೂರಿನಲ್ಲೇ ಇರುವುದರಿಂದ, ಅವರಿಗೆ ವಸತಿ ಕಲ್ಪಿಸಬೇಕಾದುದು ಅವಶ್ಯ ಇದೆ, ಈ ಬಗ್ಗೆ ಅವರಿಗೆ ದಯಮಾಡಿ ಯಾವಾಗ ವಸತಿ ಕಲ್ಪಿಸಿಕೊಡುತ್ತೀರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಸದಸ್ಯರು ಯಾವರೀತಿಯಲ್ಲಿ ಅನರ್ಹರಾಗಿದ್ದಾರೆಂದು ಕೇಳಿದರು. ಜೀತದಾಳುಗಳ ಪಟ್ಟಿಯನ್ನು ತಯಾರು ಮಾಡಿದಮೇಲೆ ಆ ಪಟ್ಟಿಯನ್ನು ಪರಿಷ್ಕೃತ ಗೊಳಿಸಿ ಅವರಿಗೆ ಪರಿಹಾರ ಕೊಡಬೇಕೆಂದು ಹೊರಟಾಗ ಆ ಪಟ್ಟಿಯಲ್ಲಿ ಇರತಕ್ಕವರು ಕೆಲವರು ಇಲ್ಲ ಎನ್ನುವಂಥ ದೂರುಗಳು ಬಂದಿದ್ದರಿಂದ, ಆಗ ಗ್ರಾಮ ಸಭೆಯಲ್ಲಿ ಇದ್ದಾರೋ ಇಲ್ಲವೋ ಎನ್ನುವುದನ್ನು ನೋಡಿ ಪರಿಷ್ಕೃತ ಪಟ್ಟಿಯನ್ನು ತಯಾರು ಮಾಡಬೇಕೆಂದು ಹೇಳಿದಾಗ ೫,೫೨೦ ಜನರು ಅನರ್ಹರು ಎಂದು ಕಂಡುಬಂತು. ಇದು ಹೇಗೆ ಆಗಿದೆ ಅಂದರೆ. ಕೆಲವುಕಡೆ ಎರಡೆರಡು ಹೆಸರುಗಳು ಇವೆ, ಕೆಲವರು ಊರು ಬಿಟ್ಟು ಹೋಗಿದ್ದಾರೆ, ಕೆಲವರು ಸತ್ತು ಹೋಗಿದ್ದಾರೆ. ಈ ರೀತಿಯಲ್ಲಿ ಅನರ್ಹರಾಗಿರುವುದು ಕಂಡುಬಂದಿದೆ. ಇಡೀ ರಾಜ್ಯದಲ್ಲಿ ೬೦ ಪರ್ಸೆಂಟ್ ಇದ್ದರೆ ಮೈಸೂರು ಜಿಲ್ಲೆಯಲ್ಲಿ ೪೦ ಪರ್ಸೆಂಟ್ ಜೀತದಾಳುಗಳಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಇರತಕ್ಕ ೨೪ ಸಾವಿರ ಚಿಲ್ಲರೆ ಜನ ಏನಿದ್ದಾರೆ ಅವರೆಲ್ಲರಿಗೂ ನಾವು ಪುನರ್ವಸತಿಯನ್ನು ಕಲ್ಪಿಸಿಕೊಡಬೇಕೆಂಬ ಉದ್ದೇಶ ಇದೆ. ಆದರೆ ಇದಕ್ಕೆ ಕೇಂದ್ರ ಸರ್ಕಾರದಿಂದ ಹಣ ಸಹಾಯ ಬರಬೇಕಾಗುತ್ತದೆ. ಅವರ ವಾರ್ಷಿಕ ಗುರಿಗನುಗುಣ ವಾಗಿ ನಾವೂ ಕೂಡ ನಮ್ಮ ರಾಜ್ಯದ ಜಿಲ್ಲೆಗಳಲ್ಲಿ ನಮ್ಮ ಗುರಿಯನ್ನು ನಿಗದಿ ಮಾಡಿಕೊಳ್ಳುತ್ತೇವೆ. ಕೇಂದ್ರ ಸರ್ಕಾರದವರು ಈ ಒಂದು ಸಲಹೆಗೆ ಒಪ್ಪುವುದಾದರೆ ೧೯೮೮-೮೯ನೇ ಸಾಲಿನಲ್ಲಿಯೇ ರಾಜ್ಯ ದಲ್ಲಿ ಇರತಕ್ಕ ಎಲ್ಲಾ ಜೀತದಾಳುಗಳಿಗೂ ಪುನರ್ವಸತಿಯನ್ನು ನಾವು ಕಲ್ಪಿಸಿಕೊಡುತ್ತೇವೆ.

ಶ್ರೀ ಜಿ. ರಾಜೂಗೌಡ.—ಸ್ವಾಮಿ, ಜೀತದಾಳುಗಳಿಗೆ ಚರಾಸ್ತಿಯನ್ನು ವಿತರಣೆ ಮಾಡುವಾಗ ಅನೇಕ ರೀತಿಯ ದುರುಪಯೋಗಗಳಾಗಿವೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ನೀವು ಚರಾಸ್ತಿಗಳನ್ನು ಹಂಚುವಾಗ ಜೀತಮುಕ್ತರ ಸುತ್ತಮುತ್ತ ಇರತಕ್ಕವರಿಗೆ ಅಂದರೆ ಕೆಲವರಿಗೆ ಮಾತ್ರ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ನೀವು ಚರಾಸ್ತಿಯನ್ನು ಕೊಡುವುದಕ್ಕೆ ಬದಲಾಗಿ ಸ್ಥಿರಾಸ್ತಿ ಯನ್ನು ವಿತರಣೆ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ ? ಏಕೆಂದರೆ ಬಿ.ಡಿ.ಓ.ಗಳು ಹೆಚ್ಚು ಹೆಚ್ಚು ಹಣವನ್ನು ಕೊಟ್ಟು ತಮಗೆ ಬೇಕಾದ ಒಳ್ಳೆಯ ಜಾಗಗಳಿಗೆ ಹಾಕಿಸಿಕೊಂಡಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಹಿಂದೆ ಅನೇಕ ರೀತಿಯ ದುರುಪಯೋಗಗಳು ಆಗಿದ್ದುದನ್ನು ವಿಚಾರಣೆ ಮಾಡಿಸಿದ್ದೇವೆ. ಇವತ್ತೂಕೂಡ ಕೆಲವುಕಡೆ ದುರುಪಯೋಗವಾಗುತ್ತಿದೆ ಎಂಬುದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ ಮಾನ್ಯ ಸದಸ್ಯರು ಹೇಳುವಂತೆ ಬಿ.ಡಿ.ಓ.ಗಳಿಗೆ ಈಗ ಹೆಚ್ಚಿಗೆ ಸ್ವಾತಂತ್ರ್ಯವಿಲ್ಲ. ಏಕೆಂದರೆ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯತಿಗಳೇ ಇದರ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿವೆ. ಜೀತದಾಳು ಗಳಿಗೆ ಪುನರ್ ವಸತಿಯನ್ನು ಕಲ್ಪಿಸುವಾಗ ಅವರಿಗೆ ಚರಾಸ್ತಿಯನ್ನು ಕೊಡುವುದಕ್ಕೆ ಬದಲು ಸ್ಥಿರಾಸ್ತಿಯನ್ನು ಕೊಡತಕ್ಕದ್ದು ಉತ್ತಮವಾದ ಮಾರ್ಗವೆಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಇನ್ನುಮುಂದೆ ಅವರು ಆ ರೀತಿ ಮಾಡಿ ಕಳುಹಿಸಿಕೊಟ್ಟರೆ ಅದಕ್ಕೆ ಕಾನೂನಿನಲ್ಲಿ ಏನಾದರೂ ಬಿಕ್ಕಟ್ಟು ಇದ್ದರೆ ಅದನ್ನು ಬಗೆಹರಿಸಿಕೊಡುತ್ತೇನೆಂದೂ ಹೇಳಬಯಸುತ್ತೇನೆ. ಇದಕ್ಕೆ ನನ್ನ ಆಭ್ಯಂತರವಿಲ್ಲ.

ಹೊಸಪೇಟೆ ಮಾರ್ಕೆಟ್ ಸಂಕೀರ್ಣ

(೬೬೩) ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸಪೇಟೆ ನಗರದ ಹಳೆ ಬಸ್ ನಿಲ್ದಾಣದ ಆವರಣದ ಅಂಗಡಿ ಸಂಕೀರ್ಣದಲ್ಲಿ ಕಟ್ಟುತ್ತಿರುವ ಸಣ್ಣ ಅಂಗಡಿಗಳು. ಸರ್ಕಾರ ದಿನಾಂಕ ೨೫-೪-೧೯೮೦ ಮತ್ತು ೨೧-೧೧-೧೯೮೪ ರಲ್ಲಿ ಹೊರಡಿಸಿರುವ